೫) ಬೆಂಗಳೂರು ಮತ್ತು ಮೈಸೂರಿನ ಮುದ್ರಣಾಲಯಗಳ ಕೆಲಸವನ್ನು ಖಾಸಗಿಯವರಿಂದ ಮಾಡಿಸಲಾಗುತ್ತಿದೆಯೇ ? ಹಾಗಿದ್ದಲ್ಲಿ ಅವರಿಗೆ ಕೊಡುತ್ತಿರುವ ಹಣವೆಷ್ಟು ?

೬) ಸದರಿ ಮುದ್ರಣಾಲಯಗಳಲ್ಲಿರುವ ವಿವಿಧ ದರ್ಜೆಯ ನೌಕರರ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

೪) ೧. ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಹಾಗೂ ಅದರ ಶಾಖಾ ಮುದ್ರಣಾಲಯಗಳು. –೫

೨. ಪಠ್ಯ ಪುಸ್ತಕ ಮುದ್ರಣಾಲಯ ಮೈಸೂರು ಹಾಗೂ ಗುಲ್ಬರ್ಗ –೨

೫) ೧. ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಹಾಗೂ ಅದರ ಶಾಖಾ ಮುದ್ರಣಾಲಯಗಳಿಗೆ ತಗಲುವ ಅಂದಾಜು ವೆಚ್ಚ ರೂ. ೮,೯೪,೧೬,೦೦೦–೦೦

೨. ಪಠ್ಯ ಪುಸ್ತಕ ಮುದ್ರಣಾಲಯಗಳಿಗೆ ತಗಲುವ ಅಂದಾಜು ವೆಚ್ಚ ರೂ. ೭,೦೨,೦೦,೦೦೦–೦೦

೬) ೧. ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಹಾಗೂ ಅದರ ಶಾಖಾ ಮುದ್ರಣಾಲಯಗಳ ಕೆಲಸಗಳನ್ನು ಖಾಸಗಿ ಮುದ್ರಣಾಲಯಗಳಿಂದ ಮಾಡಿಸುತ್ತಿಲ್ಲ.

೨. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಸಂಶೋಧನೆ ಮತ್ತು ತರಬೇತಿಯ ಅಧೀನಕ್ಕೊಳಪಡುವ ಪಠ್ಯ ಪುಸ್ತಕ ಮುದ್ರಣಾಲಯ, ಮೈಸೂರು ಹಾಗೂ ಗುಲ್ಬರ್ಗ ಇವುಗಳಿಂದ ೧೯೫೯-೬೦ನೇ ಸಾಲಿನಲ್ಲಿ ರಷ್ಟು ರಾಷ್ಟ್ರೀಯ ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗಿದ್ದು ಮಿಕ್ಕ ರಾಷ್ಟ್ರೀಯ ಪಠ್ಯ ಪುಸ್ತಕಗಳನ್ನು ಖಾಸಗಿ ಮುದ್ರಣಾಲಯಗಳಿಂದ ಮುದ್ರಿಸಲಾಗುತ್ತಿದೆ. ಸಮಾವಾರು ರೂ. ೧,೦೦,೩೩,೦೦೦/–ಗಳನ್ನು ೧೯೬೭–೬೮ ರಲ್ಲಿ ಮುದ್ರಣ ವೆಚ್ಚಕ್ಕಾಗಿ ಖಾಸಗಿ ಮುದ್ರಣಾಲಯಗಳಿಗೆ ನೀಡಿದೆ.

೪)

ಕಾರ್ಯನಿರತ ನೌಕರರು	ಗ್ರೂಪ್ ಎ	ಬಿ	ಸಿ	ಡಿ	ಒಟ್ಟು
೧ ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಹಾಗೂ ಅದರ ಶಾಖಾ ಮುದ್ರಣಾಲಯಗಳು	೧೦	೧೭	೮೨೫	೧,೫೪೪	೨೩೯೬
೨ ಪಠ್ಯ ಪುಸ್ತಕ ಮುದ್ರಣಾಲಯಗಳು	—	೬	೩೫೭	೨೮೮	೬೫೧

ರಾಜ್ಯದಲ್ಲಿ ಭೂಸಂರಕ್ಷಣಾ ಕಾರ್ಯದ ಬಗ್ಗೆ

೧೯೬೪. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೬) ರಾಜ್ಯದಲ್ಲಿ ಇಲ್ಲಿಯವರೆಗೆ ಭೂಸಂರಕ್ಷಣಾ ಇಲಾಖೆಯ ವತಿಯಿಂದ ಉದ್ದು, ಬದು ಮೊದಲಾದ ನಿರ್ಮಾಣದ ಬಗ್ಗೆ ರೈತರಿಂದ ಬರಬೇಕಾದ ಬಾಕಿ ವಸೂಲಿಯನ್ನು ನಿಲ್ಲಿಸಿರುವುದು ನಿಜವೇ;

೭) ಈ ಬಗ್ಗೆ ವಸೂಲಿ ಮಾಡದಿರಲು ಸರ್ಕಾರದವರು ಆದೇಶ ಹೊರಡಿಸಿದ್ದಾರೆಯೇ ;

೮) ಹಾಗಿದ್ದಲ್ಲಿ, ರೈತರಿಂದ ಈ ಬಗ್ಗೆ ವಸೂಲಿ ನಿಲ್ಲಿಸದಿರಲು ಕಾರಣವೇನು?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

೬) ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಂದ ಬರಬೇಕಾದ ಉದ್ದು, ಬದು ಬಾಕಿಯ ವಸೂಲಿಯನ್ನು ಮಾತ್ರ ನಿಲ್ಲಿಸಿರುವುದು ನಿಜ.

ಆ) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬದುವಿನ ಬಾಕಿಯನ್ನು ಪೂರ್ತಿ ಮನ್ನಾ ಮಾಡಲು ಸರ್ಕಾರವು ಈಗಾಗಲೇ ಆದೇಶ ಹೊರಡಿಸಿದೆ. ಇನ್ನು ಇತರೇ ರೈತರಿಂದ ದಿನಾಂಕ ೩೧-೩-೧೯೮೮ರಂದು ಇದ್ದ ಬದುವಿನ ಬಾಕಿ ಹಣದಲ್ಲಿ ಶೇಕಡ ೫೦ರಷ್ಟು ಹಣವನ್ನು ದಿನಾಂಕ ೩೧-೩-೧೯೮೮ರ ಒಳಗಾಗಿ ಪಾವತಿ ಮಾಡಿದರೆ ಉಳಿದ ಶೇಕಡ ೫೦ರಷ್ಟು ಬಾಕಿ ಹಣವನ್ನು ಮನ್ನಾ ಮಾಡುವುದಾಗಿಯೂ ಸಹ ದಿನಾಂಕ ೨೫-೫-೮೮ರಂದು ಸರ್ಕಾರ ಆದೇಶವನ್ನು ಹೊರಡಿಸಿದೆ.

ಇ) ಮೇಲಿನ 'ಆ' ಉತ್ತರದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರೈತರು ಬಾವಿ ತೋಡುವಾಗ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳುವ ಬಗ್ಗೆ

೨೦೭೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರು ತಮ್ಮ ಕೃಷಿಸಾಯ ಜಮೀನುಗಳಲ್ಲಿ ನೀರಾವರಿ ಬಾವಿಗಳನ್ನು ತೋಡುವಾಗ ಸರ್ಕಾರದ ಅನುಮತಿ ಪಡೆಯುವಂತೆ ಕಾಯ್ದೆ ತರುವ ಬಗ್ಗೆ ಸರ್ಕಾರವು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಕಾಯ್ದೆ ತರಲಾಗುವುದು,

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಸಚಿವರು).—

ಅ) ಹೌದು.

ಆ) ಕರಡು ಕಾನೂನು ಸಚಿವ ಸಂಪುಟದ ಉಪ-ಸಮಿತಿಯ ಪರಿಶೀಲನೆಯಲ್ಲಿದೆ. ನಂತರ ಸದರಿ ಕಾನೂನನ್ನು ಜಾರಿಗೆ ತರುವ ಬಗ್ಗೆ ಆಲೋಚಿಸಲಾಗುವುದು.

ವಾಣಿಜ್ಯ ಶಿಕ್ಷಣ ಶಾಲೆಗಳಲ್ಲಿ ಹೆಚ್ಚು ಮಾಸಿಕ ಶುಲ್ಕವನ್ನು ವಸೂಲು ಮಾಡುತ್ತಿರುವುದು

೨೦೫೧. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಸರ್ಕಾರ ವಾಣಿಜ್ಯ ಶಾಲೆಗಳಲ್ಲಿನ ಮಾಸಿಕ ಶುಲ್ಕವನ್ನು ಹೆಚ್ಚಿಸದಿದ್ದರೂ (ಶೀಘ್ರಲಿಪಿ ಬೆರಳಚ್ಚು ಇತ್ಯಾದಿ ವಿಷಯಗಳಿಗೆ) ಸಹ ಕರ್ನಾಟಕ ರಾಜ್ಯ ವಾಣಿಜ್ಯ ಶಾಲೆಗಳ ಸಂಘದ (ಕಾಮರ್ಸ್ ಇನ್‌ಸ್ಟಿಟ್ಯೂಟ್ ಅಸೋಸಿಯೇಷನ್ ಆಫ್ ಕರ್ನಾಟಕ) ಆದೇಶದ ಮೇರೆಗೆ ವಾಣಿಜ್ಯ ಶಾಲೆಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರಕ್ಕೆ ದೂರುಗಳೇನಾದರೂ ಬಂದಿವೆಯೇ?

೩) ಸರ್ಕಾರದವರು ಹೆಚ್ಚಿನ ಶುಲ್ಕವನ್ನು ವಸೂಲು ಮಾಡಬಾರದೆಂದು ಸೂಚನೆ ನೀಡಿದ್ದರೂ ಅದನ್ನು ನಿರ್ಲಕ್ಷಿಸಿ, ಹೆಚ್ಚಿನ ಶುಲ್ಕವನ್ನು ವಸೂಲು ಮಾಡುತ್ತಿರುವುದು ನಿಜವೇ?

೪) ಹಾಗಿದ್ದಲ್ಲಿ ಸದರಿ ಸಂಘದ ಮಾನ್ಯತೆಯನ್ನು ರದ್ದುಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು),—

೧) ಹಾದು.

೨) ಹೌದು.